| ವಿಧಾನ ಪರಿಷತ್ತು | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 93(74) |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 17.08.2026 |
| ಉತ್ತರಿಸುವವರು | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅರಣ್ಯ ವಸ್ತುಗಳು ಮತ್ತು ಅದರ ಉಪ ಉತ್ಪನ್ನಗಳನ್ನು ಮಾರಾಟ ಮಾಡಲು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರದ ಅವಶ್ಯಕತೆ ಇದೆಯೇ; ಈ ಕುರಿತು ಇರುವ ನಿಯಮಗಳೇನು; (ವಿವರ ನೀಡುವುದು) | ಕರಿಮರ/ಬೀಟೆ (Rosewood), ಶ್ರೀಗಂಧ ಮತ್ತು ಕಥಾ/ಕಟಚು (Catechu) ಜಾತಿಯ ಮರಗಳನ್ನು ಹೊರತುಪಡಿಸಿ ಇತರ ಜಾತಿಯ ಮರಗಳ ಅರಣ್ಯ ವಸ್ತುಗಳು ಮತ್ತು ಅದರ ಉಪ ಉತ್ಪನ್ನಗಳನ್ನು ಮಾರಾಟ ಮಾಡಲು ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವ ಅವಶ್ಯಕತೆ ಇರುವುದಿಲ್ಲ.<br><br>ಕರಿಮರ/ಬೀಟೆ (Rosewood) ಮರದ ಕತ್ತರಿಸುವಿಕೆ, ಕೊಯ್ಯುವಿಕೆ ಮತ್ತು ಮಾರಾಟ ಅಥವಾ ವಿಲೇವಾರು ಮಾಡಲು ಕರ್ನಾಟಕ ಅರಣ್ಯ ಕಾಯ್ದೆ, 1963ರ ಕಲಂ 104-A ಮತ್ತು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ನಿಯಮ 127ರನ್ವಯ ಕ್ರಮ ವಹಿಸಬೇಕಿರುತ್ತದೆ.<br><br>ಶ್ರೀಗಂಧ ಮರಗಳ ಸ್ವಾಧೀನ ಹೊಂದುವಿಕೆ, ಮಾರಾಟ ಮತ್ತು ವಿಭಜನೆ ಗಂಧದ ಎಣ್ಣೆ ಭಟ್ಟಿ ಇಳಿಸುವಿಕೆ ಮತ್ತು ಮಾರಾಟ ಮಾಡಲು ಕರ್ನಾಟಕ ಅರಣ್ಯ ಕಾಯ್ದೆ, 1963ರ ಅಧ್ಯಾಯ-Xರ ಕಲಂಗಳನ್ವಯ ಮತ್ತು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ಅಧ್ಯಾಯ-XIIIರ ನಿಯಮಗಳನ್ವಯ ಕ್ರಮ ವಹಿಸಬೇಕಿರುತ್ತದೆ.<br><br>ಕಥಾ/ಕಟಚು (Catechu) ಜಾತಿಯ ಮರಗಳಿಂದ ದೊರೆತ ಕಥಾವನ್ನು ಮಾರಾಟ ಮಾಡಲು ಕರ್ನಾಟಕ ಅರಣ್ಯ ಕಾಯ್ದೆ, 1963ರ ಅಧ್ಯಾಯ-XIರ ಕಲಂಗಳನ್ವಯ ಮತ್ತು ಕರ್ನಾಟಕ ಅರಣ್ಯ ನಿಯಮಾವಳಿ, 1969ರ ಅಧ್ಯಾಯ-XIVರ ನಿಯಮಗಳನ್ವಯ ಕ್ರಮ ವಹಿಸಬೇಕಿರುತ್ತದೆ. |
| ಆ) | ರಾಜ್ಯಾದ್ಯಂತ ಹಲವಾರು ಇಂಟೀರಿಯರ್ಸ್ ಕಂಪನಿಗಳು ಹುಟ್ಟಿಕೊಂಡಿದ್ದು, ಮರಗಳ ಉತ್ಪನ್ನವಾದ ಪ್ಲೈವುಡ್ ಹಾಗೂ ಇತರ ಮರದ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದು, ಇದರಿಂದ ಅರಣ್ಯದ ತೀವ್ರತರದ ನಾಶಕ್ಕೆ ಮುನ್ನುಡಿ ಎಂಬುದರ ಬಗ್ಗೆ ಸರ್ಕಾರದ ನಿಲುವೇನು; (ವಿವರ ನೀಡುವುದು) | ರಾಜ್ಯದಲ್ಲಿ ಜನಸಾಮಾನ್ಯರಿಗೆ, ಕೈಗಾರಿಕಾ ಘಟಕಗಳಿಗೆ ಹಾಗೂ ವಿವಿಧ ಸಂಸ್ಥೆ/ಕಛೇರಿಗಳಿಗೆ ದಿನನಿತ್ಯದ ಉಪಯೋಗಕ್ಕಾಗಿ ಅಗತ್ಯವಿರುವ ಪೀಠೋಪಕರಣ ಮತ್ತು ಇತರೆ ಕಟ್ಟಿಗೆ ವಸ್ತುಗಳನ್ನು (ಪ್ಲೈವುಡ್ ಹಾಗೂ ಇತರ ಮರದ ಉತ್ಪನ್ನಗಳನ್ನು ಸೇರಿದಂತೆ) ತಯಾರಿಸಲು ಈ ಹಿಂದೆ ಅರಣ್ಯ ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆದಿರುವ ಮರಗಳನ್ನು ಬಳಸಲಾಗುತ್ತಿತ್ತು.<br><br>ನಂತರದ ಅವಧಿಯಲ್ಲಿ ಅರಣ್ಯ ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆದಿರುವ ಮರಗಳನ್ನು ಸಂರಕ್ಷಿಸುವ ದೃಷ್ಟಿಯಿಂದ ವೇಗವಾಗಿ ಬೆಳೆಯುವ ಇತರೆ ವಿವಿಧ ಜಾತಿಗಳ ಮರಗಳನ್ನು (ಉದಾಹರಣೆಗಾಗಿ:- ಹೆಬ್ಬೇವು, ಆಕೇಶಿಯಾ, ನೀಲಗಿರಿ) ಪ್ಲೈವುಡ್ ಹಾಗೂ ಇತರ ಮರದ ಉತ್ಪನ್ನಗಳಿಗೆ ಪರಿವರ್ತಿಸಿ ಪೀಠೋಪಕರಣ ಮತ್ತು ಇತರೆ ಕಟ್ಟಿಗೆ ವಸ್ತುಗಳನ್ನು ಮರ ಆಧಾರಿತ ಕಾರ್ಖಾನೆಗಳಲ್ಲಿ ತಯಾರಿಸಲಾಗುತ್ತಿದೆ. |

Scanned with OKEN Scanner

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| | | ಅಲ್ಲದೇ, ಹಲವಾರು ಮರ ಆಧಾರಿತ ಕೈಗಾರಿಕೆ ಘಟಕಗಳಿಂದ ದೊರೆಯುವ ಅನುಪಯುಕ್ತ ಮರದ ತುಂಡು(scrap wood)ಗಳನ್ನು, ಕೈಗಾರಿಕಾ ತ್ಯಾಜ್ಯ ಮರ(industrial waste wood)ಗಳನ್ನು, ಪೀಠೋಪಕರಣ ತಯಾರಿಸುವ ಘಟಕಗಳಲ್ಲಿ ಹಾಗೂ ಪ್ಯಾಕಿಂಗ್ ಉದ್ಯಮದಲ್ಲಿ ಲಭ್ಯವಾಗುವ ತ್ಯಾಜ್ಯ ಮರ(waste wood)ಗಳನ್ನು ಕಚ್ಚಾ ವಸ್ತು(raw material)ನ್ನಾಗಿ ಬಳಸಿ ಪ್ಲೈವುಡ್ ಹಾಗೂ ಇತರೆ ಆಧುನಿಕ ರೀತಿಯ ಬೋರ್ಡ್‌ಗಳನ್ನು ತಯಾರಿಸಲಾಗುತ್ತದೆ.<br><br>ಈ ರೀತಿಯಲ್ಲಿ ಅರಣ್ಯ ಪ್ರದೇಶಗಳಲ್ಲಿ ನೈಸರ್ಗಿಕವಾಗಿ ಬೆಳೆದಿರುವ ಸ್ಥಳೀಯ ಜಾತಿಗಳ ಮರಗಳ ಬದಲಾಗಿ ಈ ಮೇಲೆ ವಿವರಿಸಿದಂತೆ ವೇಗವಾಗಿ ಬೆಳೆಯುವ ಇತರ ವಿವಿಧ ಜಾತಿಗಳ ಮರಗಳನ್ನು ಹಾಗೂ ಅನುಪಯುಕ್ತ ಮರದ ತುಂಡುಗಳನ್ನು ಕಚ್ಚಾ ವಸ್ತುವನ್ನಾಗಿ ಬಳಸಿ ಪ್ಲೈವುಡ್ ಹಾಗೂ ಇತರ ಮರದ ಉತ್ಪನ್ನಗಳನ್ನು ತಯಾರಿಸುತ್ತಿರುವುದರಿಂದ ನೈಸರ್ಗಿಕವಾಗಿ ಅರಣ್ಯ ಪ್ರದೇಶಗಳನ್ನು ಸಂರಕ್ಷಿಸಲು ಸಹಾಯಕರವಾಗಿರುತ್ತದೆ.<br><br>ಇದರಿಂದಾಗಿ ಅರಣ್ಯದ ತೀವ್ರತರದ ನಾಶವಾಗುವ ಪ್ರಮೆಯ ಉದ್ಭವಿಸುವುದಿಲ್ಲ.<br><br>ಕೃಷಿ ಅರಣ್ಯಕ್ಕೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ರೈತರು ಬೆಳೆದ ಮರಗಳನ್ನು ಸಹ ಪ್ಲೈವುಡ್ ಹಾಗೂ ಇತರ ಮರದ ಉತ್ಪನ್ನಗಳನ್ನು ತಯಾರಿಸುವಲ್ಲಿ ಅಧಿಕವಾಗಿ ಬಳಸಲಾಗುತ್ತಿದೆ. ಇದರಿಂದ ಸಹ ಅರಣ್ಯದ ಮೇಲಿನ ಒತ್ತಡ ಕಡಿಮೆ ಆಗಿದೆ. |
| ಇ) | ಆಫ್ ಆಧಾರಿತ ಕಂಪನಿಯಾದ Homelane, HSR Sector 2, #1147, 1 ಬೆಂಗಳೂರು ಸೇರಿದಂತೆ ಇತರ ಇಂಟೀರಿಯರ್ಸ್ ಕಂಪನಿಗಳು ಅರಣ್ಯ ಇಲಾಖೆಯಿಂದ ಯಾವುದೇ ಅನುಮತಿ ಪಡೆಯದೆ ಮರದ ಉತ್ಪನ್ನ ಹಾಗೂ ಉಪ ಉತ್ಪನ್ನಗಳ ವ್ಯವಹಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ಕರಿಮರ/ಬೀಟೆ (Rosewood), ಶ್ರೀಗಂಧ ಮತ್ತು ಕಥಾ/ಕಟೆಚು (Catechu) ಜಾತಿಯ ಮರಗಳನ್ನು ಹೊರತುಪಡಿಸಿ ಇತರ ಅರಣ್ಯ ವಸ್ತುಗಳು ಮತ್ತು ಅದರ ಉಪ ಉತ್ಪನ್ನಗಳನ್ನು ಮಾರಾಟ ಮಾಡಲು ಅರಣ್ಯ ಇಲಾಖೆಯಿಂದ ಯಾವುದೇ ನಿರಾಕ್ಷೇಪಣಾ ಪತ್ರ ಅಥವಾ ಅನುಮತಿಯ ಅವಶ್ಯಕತೆ ಇರುವುದಿಲ್ಲ. ಈ ಕಾರಣದಿಂದ Homelane, HSR Sector 2, #1147, 1, ಬೆಂಗಳೂರು ಅಥವಾ ಇತರ ಇಂಟೀರಿಯರ್ಸ್ ಕಂಪನಿಗಳು ಮರದ ಉತ್ಪನ್ನ ಹಾಗೂ ಉಪ ಉತ್ಪನ್ನಗಳ ವ್ಯವಹಾರ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅರಣ್ಯ ಕಾಯ್ದೆ/ನಿಯಮಗಳ ಉಲ್ಲಂಘನೆ ಆದ ಪಕ್ಷದಲ್ಲಿ ಮಾತ್ರ ಅಂತಹ ಘಟಕಗಳು ಅರಣ್ಯ ಕಾಯ್ದೆ/ನಿಯಮಗಳಡಿ ನಿಯಮಾನುಸಾರ ಕ್ರಮಕ್ಕೆ ಒಳಪಟ್ಟಿರುತ್ತಾರೆ. |

**ಕಡತ ಸಂಖ್ಯೆ:ಅಪಜೀ 98 ಎಫ್‌ಎಸ್‌ಡಬ್ಲ್ಯೂ 2026**

(ರಾಮಲಿಂಗಾರೆಡ್ಡಿ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

Scanned with OKEN Scanner